ಇರ್ತಾನೆ. ಅವರೊಂದಿಗೆ ಅಪ್ಪನಿಗೆ ತುಂಬಾ ಇಂಟಿಮೇಟ್ ರಿಲೇಷನ್ ಇದೆ ಅಂತ ಅಮ್ಮ ಮೊದಲೆಲ್ಲ ಸ್ವಲ್ಪ ಬೇಸರ ಮಾಡಿಕೊಳ್ಳುತ್ತಿದ್ದಳು. ಈಗೆಲ್ಲಾ ನಾರ್ಮಲ್ ಆಗಿದೆ. ವಯಸ್ಸಾದಂತೆ ಯಾವುದೇ **gender**ನ ಮನಸ್ಸು ಮತ್ತು ದೇಹಗಳು ತಮ್ಮ **possessiveness**ನ ಇಂಟೆನ್ಸಿಟಿಯನ್ನು ಕಳೆದುಕೊಳ್ಳುತ್ತವಂತೆ. ಹಾಗೆಂದು ಮನೋರಂಜನಿ ಆಂಟೀನೆ ನನಗೆ ಹೇಳಿದ್ದು. ಅವರು ತುಂಬಾ ಮಾರ್ವೆಲಸ್ ಕೆಲಸ ಮಾಡ್ತಿದಾರೆ. ವಾರದ ಹಿಂದೆ ನನಗೊಂದು ಕೆಟ್ಟ ಕನಸು ಬಿತ್ತು. ಆ ಬಗ್ಗೆ ಮಾತನಾಡಲು ಹೋದಾಗ ನಿನ್ನ ಪ್ರಸ್ತಾಪ ಮಾಡಿದ್ದರು. ತುಂಬಾ ಇಂಟರೆಸ್ಟಿಂಗ್ ಅನ್ನಿಸ್ತು. ಪದೇ ಪದೇ ಒಂದೇ ಥರ ಕನಸು ಬೀಳುವುದೆಂದರೆ ಮೈ ಗಾಡ್! ರಿಯಲಿ ವಂಡರ್‌ಫುಲ್. ಆ ಕನಸಿನಿಂದಾಗಿಯೇ ನೀನು ಸೋನಾ ಎಂಬ ಚಂದದ ಹೆಸರನ್ನು ಆಸ್ಕರ್ ವೈಲ್ಡ್ ಎಂಬುದಾಗಿ ಬದಲಾಯಿಸಿಕೊಂಡಿದ್ದೆಂದು ಕೇಳಿ ಮತ್ತಷ್ಟು ಮಜಾ ಅನ್ನಿಸ್ತು. ಯು ನೊ ವ್ಹಾಟ್ ಐ ಡಿಡ್? ಆಸ್ಕರ್ ವೈಲ್ಡನ 'ದಿ ನೈಟಿಂಗೇಲ್ ಅಂಡ್ ದಿ ರೆಡ್ ರೋಸ್' ಕಥೆಯನ್ನು ತರಿಸಿಕೊಂಡು ಓದಿದೆ. ಅಬ್ಬಾ! ಎಂಥಾ ಮೈಮನ ಮರೆಸುವಂಥ ಕಥೆ! ನಿನ್ನನ್ನು ತುಂಬಾ ಇನ್ನೋಸೆಂಟ್ ಎಂದು ಕೂಡ ಹೇಳಿದರು ಮನೋರಂಜನಿ ಆಂಟಿ. ಯಾರದ್ದಾದರೂ ಪ್ರೀತಿಗೆ ಒಳಗಾಗುವುದಾದರೆ ನಿನ್ನ ಪ್ರೀತಿಗೇ ಒಳಗಾಗಬೇಕೆಂಬ ತಕ್ಷಣದ ತೀರ್ಮಾನಕ್ಕೆ ಬಂದುಬಿಟ್ಟೆ ಆ ಕ್ಷಣ. ನಿನ್ನ ಫೋಟೊ ಕೂಡ ತೋರಿಸಿದರು ಮನೋರಂಜನಿ ಆಂಟಿ. ಇನ್ನು ಎಕನಾಮಿಕಲಿ ಕೂಡ ವಿ ಬೋಥ್ ವೆರಿಮಚ್ ಮ್ಯಾಚ್ ಈಚ್ ಅದರ್. ಅಪ್ಪನಿಗೆ ತಿಳಿಸಿದೆ. ಎಂಥಾ ಕೊಇನ್ಸಿಡೆಂಟ್ ನೋಡು. ಅಪ್ಪನ ಡಿಪಾರ್ಟ್‌ಮೆಂಟ್‌ನವರು ನಿಮ್ಮ ಕಂಪನಿ ಮೇಲೆ ರೈಡ್ ಮಾಡಿದ್ದು, ಅದೇ ದಿನ ಸಂದೀಪ್ ಕೊಚಾರ್ ಅಂಕಲ್ ಮೂಲಕ ಇಬ್ಬರ ಫ್ಯಾಮಿಲಿಗಳು ಕನೆಕ್ಟ್ ಆದದ್ದು... ಇದೆಲ್ಲಾ ಒಂದು ಸಿನಿಮಾ ಸ್ಟೋರಿಯಂತೆ ನಿನಗೆ ಅನ್ನಿಸುತ್ತಿಲ್ಲವಾ?' ಅವಳ ಮಾತುಗಳು ಅವನ ಮೈಮನಗಳ ಪ್ರತಿಯೊಂದು ಅಣುವಿಗೂ ಇಳಿದಂತೆ...

'ನೀನು ಇಡಿಯಾಗಿ ನನಗೆ ಒಪ್ಪಿಗೆಯಾದೆ. ಬಹುಶಃ ನೀನೆ ನನ್ನ ನೈಟಿಂಗೇಲ್ ಇರಬೇಕು' ಎರಡೇ ವಾಕ್ಯ ಮಾತನಾಡಲು ಅವನಿಗೆ ಸಾಧ್ಯವಾದದ್ದು.

'ನೈಟಿಂಗೇಲ್ ಎಂದೆಯಾ ನನ್ನನ್ನು? ನನಗೆ ನಿಜಕ್ಕೂ ಹಾಡಲು ಬರುವುದಿಲ್ಲ. ಡ್ಯಾನ್ಸ್ ಚೆನ್ನಾಗಿ ಮಾಡ್ತೀನಿ. ಇಷ್ಟಕ್ಕೂ ಗಂಡು ನೈಟಿಂಗೇಲ್ ಅಂತೆ ಹಾಡುವುದು. ಹೆಣ್ಣು ನೈಟಿಂಗೇಲ್ ಹಾಡುವುದಿಲ್ಲವಂತೆ. ಪಕ್ಷಿ ಪ್ರಪಂಚದಲ್ಲಿ ಬಹುತೇಕ ಹಾಡುವುಧು ಗಂಡುಗಳೇನಂತೆ. ನನಗಿದು ಗೊತ್ತಿರಲಿಲ್ಲ. ಇತ್ತೀಚೆಗೆ ಯಾವುದೊ ಮ್ಯಾಗಜಿನ್‌ನಲ್ಲಿ ಓದಿ ಅಚ್ಚರಿಯಾಯ್ತು' ಅವಳ ಮಾತುಗಳಿಂದ ಅವನಿಗೂ ಆಶ್ಚರ್ಯವಾಗಿತ್ತು.

'ರಿಯಲಿ ವಂಡರ್‌ಫುಲ್, ನನಗೂ ಇಂದೇ ಈ ವಿಷಯ ತಿಳಿತಿರೋದು, ಆದರೆ ನನ್ನ ಮನಸ್ಸಿನಲ್ಲಿ ನೈಟಿಂಗೇಲ್ ಎಂದರೆ ತಂಗಾಳಿಯಂಥ ಒಂದು ಸುಂದರ ಬೆಡಗಿ. ಯು ರಿಸೆಂಬಲ್ ವ್ಹಾಟ್ ಐ ಮೀನ್ ನೈಟಿಂಗೇಲ್' ಅವಳಿಗೆ ಖುಷಿಯಾಗುವಂತೆ ಮಾತನಾಡಿದ. 'ನೀನು ಚೋರ್ ಬಜಾರ್ ನೋಡಿದ್ದೀಯಾ' ಕೇಳಿದ್ದಳವಳು ಕೂಡಲೇ. ಆಸ್ಕರ್ ವೈಲ್ಡ್ ಚೋರ್ ಬಜಾರ್ ಹೆಸರನ್ನು ಕೇಳಿದ್ದನೇ ಹೊರತು, ನೋಡಿರಲಿಲ್ಲ.

'ಇಲ್ಲ, ನೋಡಿಲ್ಲ' ನಿಜವನ್ನೇ ಹೇಳಿದ್ದ.

'ಅಯ್ಯೋ ಬುದ್ದು, ಮುಂಬಯಿಯಲ್ಲಿದ್ದು ಚೋರ್ ಬಜಾರ್ ನೋಡಿಲ್ಲ ಅಂದ್ರೆ ಏನು ಹೇಳಬೇಕು. ನೀನೇ ಏನು, ಮುಂಬಯಿಯ ಲಕ್ಷಾಂತರ ಜನರಿಗೆ ಅದರ ಹೆಸರೂ ಗೊತ್ತಿಲ್ಲ ಬಿಡು. ನಾನು ಐದಾರು ಸಾರಿ ಚೋರ್ ಬಜಾರ್‌ಗೆ ಹೋಗಿದ್ದೀನಿ, ಬರ್ತೀಯಾ ತೋರಿಸ್ತೀನಿ. ನಾಳೆ ಸಂಡೆ ಸ್ಪೆಷಲ್ ಚೋರ್ ಬಜಾರ್ ಇರುತ್ತೆ. ಬೆಳಿಗ್ಗೆ ನಾಲ್ಕು ಗಂಟೆಗೆ ಸ್ಟಾರ್ಟ್ ಆದ್ರೆ ಆರು ಗಂಟೆಗೆಲ್ಲ ಕ್ಲೋಸ್. ಬರಿ ಎರಡು ಗಂಟೆಯಲ್ಲಿ ಕೋಟ್ಯಂತರ ರೂಪಾಯಿ ಟರ್ನ್ ಓವರ್ ಆಗುತ್ತೆ' ಅವಳ ಮಾತುಗಳಿಂದ ಅವನಲ್ಲಿ ಕುತೂಹಲ ಹುಟ್ಟಿತ್ತು. ಅವನ ತುಟಿಗಳು ಮಾತುಗಳಿಗೆ ಒದ್ದಾಡುತ್ತಿದ್ದುದ್ದನ್ನು ಅರಿತು–

'ನೀನು ದೊಡ್ಡ ಶ್ರೀಮಂತನಾಗಿ ಐದು ಪರ್ಸೆಂಟ್ ಮುಂಬಯಿಯನ್ನೂ ನೋಡಿಲ್ಲ ಬಿಡು. ಬಡವರು ಮುಂಬಯಿಯನ್ನು ಸುತ್ತಿ ಮಜಾ ತಗೊಂಡಂತೆ ಶ್ರೀಮಂತರು ಸುತ್ತಿ ಖುಷಿ ಪಡೋದಿಲ್ಲ. **The rich think it stigma for their prestige. But you know for me it is thrill, joy, kick and what not...**' ಎಂದು ಅವಳು ಸಣ್ಣಗೆ ರೇಗಿಸಿದ ಮಾತುಗಳಿಂದ ಮ್ಯಾಥ್ಯೂ ಅಲೆಗ್ಸಾಂಡರನನ್ನು ನೋಡಲು ನಾಗ್ಪಾಡಿಗೆ ಹೋದಾಗ ಅವನು ತನ್ನನ್ನು ಕುರಿತು ಇಂಥದ್ದೇ ಮಾತು ಹೇಳಿದ್ದಿದ್ದು ಆಸ್ಕರ್ ವೈಲ್ಡನಿಗೆ ನೆನಪಾಗಿತ್ತು.

'ಚೋರ್ ಬಜಾರ್‌ನ ಸ್ಪೆಷಲ್ ಏನು?' ಕೇಳಿದ್ದ ಆಸ್ಕರ್ ವೈಲ್ಡ್, ಮತ್ತಷ್ಟು ಪೂರ್ವಿಕಾಳ ಮಧುರ ಧ್ವನಿಯನ್ನು ಕೇಳಿಸಿಕೊಳ್ಳುವ ಹಂಬಲದಿಂದ.

'ಕದ್ದ ಬೆಲೆಬಾಳುವ ಮಾಲುಗಳನ್ನು ಚೋರ್ ಬಜಾರಿನಲ್ಲಿ ಮಾರುತ್ತಾರೆ. ತುಂಬಾ ಬೆಲೆಬಾಳುವ ಆಂಟಿಕ್ ವಸ್ತುಗಳು ಅಲ್ಲಿ ಸಸ್ತಾ ಬೆಲೆಗೆ ಸಿಗುತ್ತವೆ. ಚಿನ್ನ–ಬೆಳ್ಳಿಯ ವಿಗ್ರಹಗಳನ್ನು ಸಹಾ ಸೀಕ್ರೆಟ್ ಆಗಿ ರೆಗ್ಯುಲರ್ ಗಿರಾಕಿಗಳಿಗೆ ಮಾರುತ್ತಾರೆ. ಫೇಮಸ್ ಫಿಲ್ಮ್ ಸ್ಟಾರುಗಳು ಕೂಡಾ ಬುರ್ಖಾ ಧರಿಸಿ ಚೋರ್ ಬಜಾರಿನಲ್ಲಿ ಓಡಾಡಿಕೊಂಡು ತಮಗಿಷ್ಟದ ಲಭ್ಯವಿರುವ ವಿಶೇಷ ವಸ್ತುಗಳನ್ನು ಪರ್ಚೇಸ್ ಮಾಡುತ್ತಾರೆ. ರೇಖಾ, ಕರಿನಾ ಕಪೂರ್, ಹೆಲೆನ್, ಐಶ್ವರ್ಯ ರೈ, ಕತ್ರಿನಾ ಕೈಫ್, ವಿದ್ಯಾಬಾಲನ್, ರಾಖಿ, ಆಲಿಯಾ ಭಟ್ ಮುಂತಾದವರು ತಾವು ಬುರ್ಖಾ ತೊಟ್ಟು ಅನೇಕ ಬಾರಿ ಚೋರ್ ಬಜಾರಿನಲ್ಲಿ ಸುತ್ತಾಡಿರುವುದಾಗಿ ಹೇಳಿಕೊಂಡಿದ್ದಾರೆ. ಚೋರ್ ಬಜಾರ್ ಈಸ್ ಜಸ್ಟ್ ಮೈಂಡ್ ಬ್ಲೋಯಿಂಗ್' ಎಂದ ಅವಳ ಮಾತುಗಳಿಂದ ಆಸ್ಕರ್ ವೈಲ್ಡ್ ಉತ್ತೇಜಿತನಾಗಿ 'ಓಕೆ, ನಿನ್ನೊಂದಿಗೆ ನಾಳೆ ಚೋರ್ ಬಜಾರ್ ಸುತ್ತುತ್ತೇನೆ' ಎಂದಿದ್ದ.

'ಹಾಗಾದರೆ ನಾಳೆ ಬೆಳಿಗ್ಗೆ ನಾಲ್ಕು ಗಂಟೆಗೆ ಗ್ರಾಂಟ್ ರೋಡಿನ ಮರಾಠ ಮಂದಿರ್ ಥಿಯೇಟರ್ ಬಳಿ ಕಾರಲ್ಲಿ ಡ್ರಾಪ್ ತೆಗೆದುಕೊ. ನಾನು ನನ್ನದೇ ಕಾರ್ ಡ್ರೈವ್ ಮಾಡಿಕೊಂಡು ಬರ್ತೀನಿ. ಮರಾಠ ಮಂದಿರದಲ್ಲಿ ಕಾರ್ ಪಾರ್ಕ್ ಮಾಡಿ ಅಲ್ಲಿಂದ ನಡೆದುಕೊಂಡೇ ಚೋರ್ ಬಜಾರಿಗೆ ಹೋಗೋಣ. ಗ್ರಾಂಟ್ ರೋಡ್, ಚೋರ್ ಬಜಾರ್ ಬೆಳಗಿನ ಮೂರು ಗಂಟೆಗೆಲ್ಲ ಜೀವ ಪಡೆದುಕೊಂಡು ಝಗಮಗಿಸುತ್ತಿರುತ್ತವೆ. ಹಾಗೆ ನೋಡಿದರೆ ಅರ್ಧ ಮುಂಬಯಿ ರಾತ್ರಿ ಮಲಗುವುದೇ ಇಲ್ಲ' ಅವಳ ಮಾತುಗಳಲ್ಲಿ ಹೊಸತನ, ಲವಲವಿಕೆ ದಟ್ಟವಾಗಿರುವುದು ಆಸ್ಕರ್ ವೈಲ್ಡನ ಗಮನಕ್ಕೆ ಬಂದಿತ್ತು. ಮತ್ತು ಅದು ಅವನಿಗೆ ಬಹಳವಾಗಿ ಇಷ್ಟವಾಗಿತ್ತು ಕೂಡ.

'ಓಕೆ' ಎಂದಿದ್ದ.

ಬೆಳಿಗ್ಗೆ ನಾಲ್ಕು ಗಂಟೆಗೆ ಆಸ್ಕರ್ ವೈಲ್ಡ್ ಗ್ರಾಂಟ್ ರೋಡಿನ ಮರಾಠ ಮಂದಿರದ ಬಳಿ ಕಾರಿನಲ್ಲಿ ಡ್ರಾಪ್ ತೆಗೆದುಕೊಂಡು ಕಾರನ್ನು ವಾಪಸ್ಸು ಕಳುಹಿಸಿದ್ದ. ಅವನು ಕಾರು ಇಳಿದ ಐದು ನಿಮಿಷದಲ್ಲೇ ಆಡಿ ಕಾರೊಂದು ಅವನ ಮುಂದೆ ನಿಂತಿತ್ತು. ಕಾರಿನಿಂದ ಬುರ್ಖಾ ತೊಟ್ಟ ವ್ಯಕ್ತಿಯೊಂದು ಇಳಿದಿತ್ತು.

'ಹಾಯ್ ಸೋನಾ', ಅದು ಪೂರ್ವಿಕಾ ದೇಶಪಾಂಡೆಯ ಧ್ವನಿ. ಬಂದವಳೇ ಅವನ ಕೈಹಿಡಿದು ಕಾರಿನಲ್ಲಿ ಕೂರಿಸಿಕೊಂಡು ಮರಾಠ ಮಂದಿರ್ ಥಿಯೇಟರಿನ ಕಾಂಪೌಂಡ್ ಒಳಗೆ ಕಾರನ್ನು ಪಾರ್ಕ್ ಮಾಡಿ ತನ್ನ ವ್ಯಾನಿಟಿ ಬ್ಯಾಗಿನಿಂದ ಬುರ್ಖಾವೊಂದನ್ನು ತೆಗೆದು ಹಾಕಿಕೊಳ್ಳಲು ಕೊಟ್ಟಿದ್ದಳು.

'ಅರೆ, ನಾನು' ಎಂದ ಆಸ್ಕರ್ ವೈಲ್ಡ್ ನಗುತ್ತಾ, ಅವಳ ಕಡೆಯಿಂದ ಬರುತ್ತಿದ್ದ ಅಪರೂಪದ ಅತ್ತರಿನ ಸುವಾಸನೆಯಲ್ಲಿ ಮುಳುಗುತ್ತಾ.

'ಬುರ್ಖಾ ಯಾರು ತೊಟ್ಟರೇನು? ನಿನ್ನ ಜೆಂಡರ್ ಏನೂ ಬದಲಾಗೋದಿಲ್ಲ. ನಮ್ಮ ಐಡೆಂಟಿಟಿಯನ್ನು ಹೈಡ್ ಮಾಡಲು ಮಾತ್ರ. ಇದೂ ಒಂಥರಾ ಐಡೆಂಟಿಟಿ ಕ್ರೈಸಿಸ್ ಅಲ್ವಾ?' ಎಂದಳು ನಗುತ್ತಾ. ಆಸ್ಕರ್ ವೈಲ್ಡ್ ಅವಳ ಮಾತುಗಳಿಗೆ ಮಂತ್ರಮುಗ್ಧನಾಗಿ ಬುರ್ಖಾವನ್ನು ಮೇಲಿಂದ ಆರಾಮವಾಗಿ ಇಳಿಬಿಟ್ಟುಕೊಂಡಿದ್ದ. ಕಾರಿನ ರಿಯರ್ ವ್ಯೂವ್ ಮಿರರ್‌ನಲ್ಲಿ ದೃಷ್ಟಿ ನೆಟ್ಟವನಿಗೆ ತನ್ನ ಮುಖ ಬುರ್ಖಾದಿಂದ ಕವರ್ ಆಗಿ ತನಗೆ ತಾನೇ ಗುರುತು ಹಿಡಿಯದವನಂತಾಗಿದ್ದ. ಒಂಥರಾ ಮಜಾ ಅನ್ನಿಸಿತ್ತು. ಕಾರಿಳಿದು ಹತ್ತನ್ನೆರಡು ನಿಮಿಷ ನಡೆದು ಅವರು ಚೋರ್ ಬಜಾರ್ ಪ್ರವೇಶಿಸಿದ್ದರು. ಫುಟ್ಪಾತ್‌ಗೆ ಅಂಟಿಕೊಂಡಂತೆ, ಮತ್ತೆ ಕೆಲವು ಕಡೆ ಫುಟ್ಪಾತನ್ನು ಆಕ್ರಮಿಸಿಕೊಂಡಂತೆ ಒಂದನ್ನೊಂದು ಮೀರಿಸುವಂತೆ ತರಹೇವಾರಿ ಸರಕುಗಳನ್ನೊತ್ತ ಅಂಗಡಿಗಳು ವಿಜೃಂಭಿಸುತ್ತಿದ್ದವು. ಪೂರ್ವಿಕಾ ದೇಶಪಾಂಡೆ ನಿನ್ನೆ ಫೋನಿನನಲ್ಲಿ ಹೇಳಿದ್ದಕ್ಕಿಂತಲೂ ಮಿಗಿಲಾಗಿ ಅಲಂಕೃತಗೊಂಡು ಚೋರ್ ಬಜಾರ್ ಕಂಗೊಳಿಸುತ್ತಿತ್ತು. ಅಂಗಡಿ ಮಾಲಕರು ಮತ್ತು ಗಿರಾಕಿಗಳ ಮಧ್ಯೆ ಕುಶಾಲು ಮತ್ತು ಚೌಕಾಸಿಯ ಮಾತುಗಳು ಮುದಗೊಳಿಸುತ್ತಿದ್ದವು. ಅವಳು ಒಂದು ಅಂಗಡಿಯ ಹತ್ತಿರ ನಿಂತಳು.

(ಸಶೇಷ)